**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಯವರ**

**ನ್ಯಾಯಾಲಯ, ಸೋಮವಾರಪೇಟೆ**

**ದಿನಾಂಕ : 28.09.2021**

**ಸಿ.ಸಿ. ನಂ. 266/2019**

ಫಿರ್ಯಾದಿಃ ಶ್ರೀಎ ಬಿ ಚಂದ್ರಶೇಖರ್ ಬಿನ್ ಎ ಸಿ ಬಸಪ್ಪ

:ವಿರುದ್ಧ:

ಆರೋಪಿಃ ಶ್ರೀ ಎ ಸಿ ಪ್ರಭಾಕರ್ ಬಿನ್ ಲೇಟ್ ಚಂದೇಗೌಡ,
ಸ್ಟ್ಯಾಂಡರ್ಡ್ ಇಂಜಿನಿಯರಿಂಗ್ ಸರ್ವೀಸ್,
ಅಂಡ್ ಅರ್ಥ್ ಮೂವರ್ಸ್,
ವಾಸಃ 4 ನೇ ಮುಖ್ಯ ರಸ್ತೆ, 3 ನೇ ಕ್ರಾಸ್,
ಸಂತ ಶಿಶುನಾಳ ಶರೀಫ್ ರಸ್ತೆ,
ಹೇಮಾವತಿ ನಗರ, ಹಾಸನ ಜಿಲ್ಲೆ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿಯಲ್ಲಿ ಆಪಾದನೆಯ ಸಾರಾಂಶ

ಆರೋಪಿಯಾದ ನೀನು ಫಿರ್ಯಾದುದಾರರಿಂದ 13.05.2018 ರಂದು ನಗದು ಮೂಲಕ ರೂ.**1,75,000/-** ಮತ್ತು **14.10.2018** ರಂದು **1,75,000/-** ಗಳನ್ನು ವ್ಯವಹಾರದ ಉದೇಶಕ್ಕಾಗಿ, ಕಾನೂನು ಬದ್ದ ಮತ್ತು ಕುಟುಂಬದ ಅವಶ್ಯಕತೆಗಳ ಸಲುವಾಗಿ ಒಟ್ಟು 3,50,000/- ಸಾಲ ಪಡೆದಿದ್ದು, ಸದರಿ ಸಾಲವನ್ನು ಮರುಪಾವತಿಸುವ ಸಲುವಾಗಿ ದಿನಾಂಕ **12.04.2019** ರಂದು ರೂ. **3,50,000/-** ಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಾಸನ ನಗರ ಶಾಖೆಯ ಚೆಕ್ ನಂ.**077820** ರ ಒಂದು ಚೆಕ್ ನ್ನು ನೀಡಿದ್ದು, ಫಿರ್ಯಾದಿದಾರರು ಸದರಿ ಚೆಕ್ ನ್ನು ತಮ್ಮ ಖಾತೆಯನ್ನು ಹೊಂದಿರುವ ಕೆನರಾ ಬ್ಯಾಂಕ್ , ಆಲೂರು ಸಿದ್ಧಾಪುರ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಬ್ಯಾಂಕಿನವರು " ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿನಾಂಕ 16.04.2019 ರಂದು ಹಿಂದಿರುಗಿಸಿರುತ್ತಾರೆ.

ಫಿರ್ಯಾದಿದಾರರು ದಿಃ 04.05.2019 ರಂದು ಹಣವನ್ನು ಮರುಪಾವತಿಸುವಂತೆ ತಮ್ಮ ವಕೀಲರ ಮೂಲಕ ನೋಟೀಸನ್ನು ನೀಡಿದ್ದು ಸದರಿ ನೋಟೀಸ್ ದಿನಾಂಕ 06.05.2019 ರಂದು ಖುದ್ದು ಜಾರಿಯಾಗಿದ್ದರೂ ಸಹ, ಅದಕ್ಕೆ ಉತ್ತರವನ್ನು ನೀಡದೇ ಇದುವರೆಗೂ ಚೆಕ್ ನ ಹಣವನ್ನು

COURT OF THE SENIOR CIVIL JUDGE & JMFC SOMWARPET

ಪಾವತಿಸಿರುವುದಿಲ್ಲವಾದ್ದರಿಂದ ನೀವು ಎನ್.ಐ.ಆಕ್ಟ್ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುವಿರೆಂದು ಆಪಾದಿಸಲಾಗಿದೆ.

ಪ್ರಃ1. ಈಗ ಓದಿ ವಿವರಿಸಿದ ಆಪಾದನೆ ತಿಳಿಯಿತೇ?

ಉಃ

ಪ್ರಃ2. ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವೆಯೋ ಅಥವಾ ಪ್ರತಿರಕ್ಷಣೆಯಿದೆಯೋ?

ಉಃ

(ಆರೋಪಿಗೆ ದೋಷಾರೋಪಣೆ ಸಾರಾಂಶವನ್ನು ಆತನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಇಂದು ದಿನಾಂಕ 28.09.2021 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಆತನು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ)

COURT OF THE SENIOR CIVIL JUDGE & JMFC SOMWARPET

(ಶ್ರೀ ಗೋಕುಲ ಕೆ.)
ಹಿರಿಯ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.,
ಸೋಮವಾರಪೇಟೆ.